ಪ್ರದೇಶ ಸಮಾಚಾರ

ಸುದ್ದಿ ಕಾರ್ನರ್

ಇಂದು ರಾಮಕೃಷ್ಣ ಮಠದಲ್ಲಿ ಭಜನಾ ಸಂಗಮ

ಮಂಗಳೂರು: ಮಂಗಳಾದೇವಿಯಲ್ಲಿರುವ ರಾಮಕೃಷ್ಣ ಮಠದಲ್ಲಿ ಜ.1ರಂದು ಭಜನಾ ಸಂಗಮದೊಂದಿಗೆ 2024 ನೇ ಸಾಲಿನ ಭಜನ್ ಸಂಧ್ಯಾ ಸರಣಿಯ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಲಾಗಿದೆ. ಸಂಜೆ 4.30 ಕ್ಕೆ ದೀನ್ ರಾಜ್ ಕಳವಾರು ನೇತೃತ್ವದಲ್ಲಿ 500ಕ್ಕೂ ಹೆಚ್ಚು ಮಕ್ಕಳಿಂದ ಮಂಗಳಾದೇವಿ ವೃತ್ತದಿಂದ ರಾಮಕೃಷ್ಣ ಮಠದವರೆಗೆ ಕುಣಿತ ಭಜನೆಯೊಂದಿಗೆ ಶೋಭಾಯಾತ್ರೆ ನಡೆಯಲಿದೆ. ಭಜನಾ ಶೋಭಾಯಾತ್ರೆಗೆ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅನುವಂಶಿಕ ಅರ್ಚಕ ಹರಿನಾರಾಯಣ ಆಸ್ರಣ್ಣ ಚಾಲನೆ ನೀಡಲಿದ್ದಾರೆ. ಸಂಜೆ 6ಕ್ಕೆ 2024ನೇ ಸಾಲಿನ ಭಜನ್ ಸಂಧ್ಯಾ ಕಾರ್ಯಕ್ರಮದ ಉದ್ಘಾಟನೆ ಮಂಗಳೂರು ರಾಮಕೃಷ್ಣ ಮಠದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ನಡೆಯಲಿದೆ. ಮಠದ ಅಧ್ಯಕ್ಷ ಸ್ವಾಮಿ ಜಿತಕಾಮಾನಂದಜಿ ಸಾನಿಧ್ಯ ವಹಿಸಲಿದ್ದಾರೆ. ಬೆಂಗಳೂರಿನ ಶಾಸ್ತ್ರೀಯ ಸಂಗೀತಗಾರ ವಿದ್ಯಾಭೂಷಣ ಭಜನ್ ಸಂಧ್ಯಾ ಉದ್ಘಾಟಿಸಲಿದ್ದಾರೆ. ನಿಟ್ಟೆ ವಿವಿ ಕುಲಾಧಿಪತಿ ಎನ್.ವಿನಯ್ ಹೆಗ್ಡೆ, ಮಂಗಳೂರಿನ ಎನ್‌ಸಿಎಸ್ ಆಸ್ಪತ್ರೆ ಚೇರ್ಮನ್ ಡಾ.ಜೀವರಾಜ್ ಸೊರಕೆ, ನಿವೃತ್ತ ಯೋಧ ಕ್ಯಾ.ಗಣೇಶ್ ಕಾರ್ಣಿಕ್ ಭಾಗವಹಿಸಲಿದ್ದಾರೆ. ಸಂಜೆ 6.30ಕ್ಕೆ ವಿದ್ಯಾಭೂಷಣ ಅವರಿಂದ ಗಾನಸುಧೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

10 ಮಂದಿಗೆ ಕೋವಿಡ್ ಪಾಸಿಟಿವ್

ಮಂಗಳೂರು: ದಕ್ಷಿಣ ಕನ್ನಡದಲ್ಲಿ ಶನಿವಾರ 270 ಮಂದಿಯ ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, ಆರು ಮಹಿಳೆಯರು ಸಹಿತ 10 ಮಂದಿಗೆ ಪಾಸಿಟಿವ್ ದೃಢಪಟ್ಟಿದೆ. ಇದರಿಂದ ಜಿಲ್ಲೆಯಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 40 ತಲುಪಿದೆ.

ಕೋಟಿ ತುಳಸಿ ಅರ್ಚನೆ ನೆರವೇರಿಸಿ ಕಾಣಿಯೂರು ಶ್ರೀ ಆಶೀರ್ವಚನ

ಲೋಕಕಲ್ಯಾಣದ ಕಾರ್ಯಕ್ಕೆ ಒಲುಮೆ

ಉಡುಪಿ: ತುಳಸಿ ಇಲ್ಲದ ಪೂಜೆಯನ್ನು ಒಲ್ಲನೋ ಹರಿ ಎಂಬ ದಾಸವಾಣಿಯಂತೆ ಕೃಷ್ಣ ದೇವರಿಗೆ ತುಳಸಿ ಅತಿ ಪ್ರಿಯವಾದುದು. ಲೋಕಕಲ್ಯಾಣಾರ್ಥ ಮಾಡಿದ ಅರ್ಚನೆ ದೇವರ ಒಲುಮೆಗೆ ಕಾರಣವಾಗುತ್ತದೆ ಎಂದು ಕಾಣಿಯೂರು ಮಠಾಧೀಶ ಶ್ರೀವಿದ್ಯಾವಲ್ಲಭತೀರ್ಥ ಶ್ರೀಪಾದರು ಹೇಳಿದರು.

ಕೃಷ್ಣ ಮಠದಲ್ಲಿ ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಆಶ್ರಯದಲ್ಲಿ ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣ ಮಹಾಮಂಡಲ ಅಂಗಸಂಸ್ಥೆ ತುಷಿಮಾಮ ಕಡಿಯಾಳಿ ನೇತೃತ್ವದಲ್ಲಿ ಉಡುಪಿ ತಾಲೂಕು ಬ್ರಾಹ್ಮಣ ಮಹಾಸಭಾ ಸಹಕಾರದೊಂದಿಗೆ ಭಾನುವಾರ ಶ್ರೀಕೃಷ್ಣನಿಗೆ ವಿಷ್ಣು ಸಹಸ್ರ ನಾಮಾವಳಿ ಸಹಿತ ಕೋಟಿ ತುಳಸಿ ಅರ್ಚನೆಯಲ್ಲಿ ಆಶೀರ್ವಚನ ನೀಡಿದರು.

ಶೀರೂರು ಮಠಾಧೀಶ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು. ಪರ್ಯಾಯ ಶ್ರೀ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು. ತುಷಿಮಾಮ ಕಡಿಯಾಳಿ ಅಧ್ಯಕ್ಷ ರಘುಪತಿ ಉಪಾಧ್ಯ, ಕಾರ್ಯದರ್ಶಿ ರಾಜೇಶ್ ಭಟ್ ಪಣಿಯಾಡಿ, ಕೋಶಾಧಿಕಾರಿ ಕೊರಂಗ್ರಪಾಡಿ ಕೃಷ್ಣಮೂರ್ತಿ ಆಚಾರ್ಯ, ಶ್ರೀಶ ಭಟ್ ಕಡೆಕಾರ್, ಅರವಿಂದ ಆಚಾರ್ಯ, ಪ್ರದೀಪ್ ಕುಮಾರ್ ಕಲ್ಕೂರ, ವಿಷ್ಣು ಆಚಾರ್ಯ ಉಪಸ್ಥಿತರಿದ್ದರು.

ಶೀರೂರು ಮಠಾಧೀಶ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಶ್ರೀಕೃಷ್ಣನಿಗೆ ವಿಷ್ಣು ಸಹಸ್ರ ನಾಮಾವಳಿ ಸಹಿತ ಕೋಟಿ ತುಳಸಿ ಅರ್ಚನೆಯೊಂದಿಗೆ ಮಹಾಮಂಗಳಾರತಿ ನೆರವೇರಿಸಿದರು.

> ತುಳಸೀಯಲ್ಲಿ ಲಕ್ಷ್ಮಿಯ ಸನ್ನಿಧಾನವಿದೆ. ತುಳಸಿ ಅರ್ಚನೆಯಿಂದ ದೇವರು ಸಂಪ್ರೀತರಾಗುತ್ತಾರೆ. ಲಕ್ಷ್ಮೀ ನಾರಾಯಣರನ್ನು ಒಟ್ಟಿಗೆ ಪೂಜಿಸಿದ ಪುಣ್ಯ ಪ್ರಾಪ್ತಿಯಾಗುತ್ತದೆ.
> | ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಶೀರೂರು ಮಠ, ಉಡುಪಿ

ಇಂದು ಸುಬ್ರಹ್ಮಣ್ಯದಿಂದ ಕುಮಾರಯಾತ್ರೆಗೆ ಚಾಲನೆ

ಸುಬ್ರಹ್ಮಣ್ಯ: ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಿಂದ ಕುಮಾರ ಯಾತ್ರೆಗೆ ಜ.1ರಂದು ಚಾಲನೆ ನೀಡಲಾಗುವುದು. ಬಹುಳ ಷಷ್ಠಿಯ ದಿನವಾದ ಜ.2ರಂದು ಕುಮಾರಪಾದ ಮತ್ತು ಪಾದದ ಸಮೀಪವಿರುವ ವಾಸುಕಿಗೆ ದೇವಳದ ಪ್ರಧಾನ ಅರ್ಚಕ ಸೀತಾರಾಮ ಯಡಪಡಿತ್ತಾಯ ಅಭಿಷೇಕ ನೆರವೇರಿಸಿ ಪೂಜೆ ಸಲ್ಲಿಸಲಿದ್ದಾರೆ.

ಕುಮಾರಪರ್ವತದಲ್ಲಿರುವ ಕುಮಾರಪಾದ.

ಸುಬ್ರಹ್ಮಣ್ಯದಿಂದ ಗಿರಿಗದ್ದೆ ಮುಖಾಂತರ ಕುಮಾರಪರ್ವತಕ್ಕೆ ಕಾಲ್ನಡಿಗೆಯಲ್ಲಿ ಭಕ್ತರು ತೆರಳಲಿದ್ದಾರೆ. ಇದಕ್ಕೆ ಪೂರಕ ವ್ಯವಸ್ಥೆ, ಊಟ, ಉಪಾಹಾರವನ್ನು ದೇವಸ್ಥಾನದ ವತಿಯಿಂದ ಮಾಡಲಾಗುತ್ತದೆ. ಜ.2ರಂದು ಮುಂಜಾನೆ ಬಿಸಿಲೆ ಮುಖಾಂತರ ಶಾಂತಹಳ್ಳಿ ಹೆಗಡೆ ಮನೆ ಮೂಲಕ ಕುಮಾರ ಪರ್ವತಕ್ಕೆ ತೆರಳಲಾಗುವುದು. ಜ.2ರಂದು ತೆರಳುವವರು ದೇವಳಕ್ಕೆ ಮೊದಲೇ ತಿಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಕರ ಜ್ಯೋತಿ ಉತ್ಸವಕ್ಕಾಗಿ ಶಬರಿಮಲೆಯಲ್ಲಿ ಗರ್ಭಗೃಹದ ಬಾಗಿಲು ಶನಿವಾರ ತೆರೆದ ಹಿನ್ನೆಲೆಯಲ್ಲಿ ಪೂಜೆ ಬಳಿಕ ತಂತ್ರಿ ಕಂಠಾರರ್ ಮಹೇಶ ಮೋಹನ್ ಮತ್ತು ಅರ್ಚಕ ವಿ.ಎನ್.ಮಹೇಶ್ ನಂಬೂದಿರಿ ಭಕ್ತರಿಗೆ ಭಸ್ಮಪ್ರಸಾದ ವಿತರಿಸಿದರು. ಸಾವಿರಾರು ಭಕ್ತರು ಅಯ್ಯಪ್ಪ ಸ್ವಾಮಿಯ ದರ್ಶನ ಪಡೆದರು.

ಮಂಗಳೂರು ಕಂಬಳ ಸಂಪನ್ನ

ಎರಡು ದಿನಗಳ ರಾಮ-ಲಕ್ಷ್ಮಣ ಜೋಡುಕರೆ | 170 ಜೊತೆ ಕೋಣಗಳು

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಬಂಗ್ರಕೂಳೂರಿನಲ್ಲಿ ಆಯೋಜಿಸಲಾದ ಏಳನೇ ವರ್ಷದ ಎರಡು ದಿನಗಳ ರಾಮ-ಲಕ್ಷ್ಮಣ ಜೋಡುಕರೆ 'ಮಂಗಳೂರು ಕಂಬಳ' ಭಾನುವಾರ ಸಂಪನ್ನಗೊಂಡಿತು.

ಶನಿವಾರ ಬೆಳಗ್ಗೆ ಆರಂಭವಾದ ಕಂಬಳ ಭಾನುವಾರ ಸಂಜೆ ವೇಳೆಗೆ ಮುಕ್ತಾಯಗೊಂಡಿತು. ಕನೆಹಲಗೆ ವಿಭಾಗದಲ್ಲಿ 8 ಜೊತೆ, ಅಡ್ಡಹಲಗೆ 4 ಜೊತೆ, ಹಗ್ಗ ಹಿರಿಯ 22 ಜೊತೆ, ನೇಗಿಲು ಹಿರಿಯ 29 ಜೊತೆ, ಹಗ್ಗ ಕಿರಿಯ 26 ಜೊತೆ, ನೇಗಿಲು ಕಿರಿಯ 81 ಜೊತೆ ಸೇರಿ ಒಟ್ಟು 170 ಜೊತೆ ಕೋಣಗಳು ಭಾಗವಹಿಸಿದ್ದವು.

ಫಲಿತಾಂಶ: ಕನೆಹಲಗೆ (ನೀರು ನೋಡಿ ಬಹುಮಾನ) ಪ್ರಥಮ- ಬೋಳಾರ ತ್ರಿಶಾಲ್ ಕೆ.ಪೂಜಾರಿ, ಹಲಗೆ ಮುಟ್ಟಿದವರು- ಬೈಂದೂರು ಮಹೇಶ್ ಪೂಜಾರಿ. ದ್ವಿತೀಯ- ಬೇಲಾಡಿ ಬಾವ ಅಶೋಕ್ ಶೆಟ್ಟಿ. ಹಲಗೆ ಮುಟ್ಟಿದವರು ತೆಕ್ಕಟ್ಟೆ ಸುಧೀರ್ ದೇವಾಡಿಗ.

ಅಡ್ಡ ಹಲಗೆ: ಪ್ರಥಮ- ಬೋಳಾರ ತ್ರಿಶಾಲ್ ಕೆ ಪೂಜಾರಿ, ಹಲಗೆ ಮುಟ್ಟಿದವರು- ಸಾವ್ಯ ಗಂಗಯ್ಯ ಪೂಜಾರಿ, ದ್ವಿತೀಯ- ಮಂಗಳೂರು ಕಂಬಳಾಭಿಮಾನಿ ವಕೀಲ ವೃಂದ, ಹಲಗೆ ಮುಟ್ಟಿದವರು- ಭಟ್ಕಳ ಹರೀಶ್

ಹಗ್ಗ ಹಿರಿಯ: ಪ್ರಥಮ- ನಂದಳಿಕೆ ಶ್ರೀಕಾಂತ್ ಭಟ್ ಎ, ಓಡಿಸಿದವರು- ಬಂಬ್ರಾಣಬೈಲು ವಂದಿತ್ ಶೆಟ್ಟಿ, ದ್ವಿತೀಯ: ನಂದಳಿಕೆ ಶ್ರೀಕಾಂತ್ ಭಟ್ ಸಿ, ಓಡಿಸಿದವರು: ಕಾವೂರು ದೋಟ ಸುದರ್ಶನ್

ಹಗ್ಗ ಕಿರಿಯ: ಪ್ರಥಮ- ಸುರತ್ಕಲ್ ಪಾಂಚಜನ್ಯ ಯೋಗಿಶ್ ಪೂಜಾರಿ, ಓಡಿಸಿದವರು- ಮಾಸ್ತಿಕಟ್ಟೆ ಸ್ವರೂಪ್, ದ್ವಿತೀಯ- ಸಾಲಿಗ್ರಾಮ ಕಾರ್ಕಡ ಪುಟ್ಟು ಹೊಳ್ಳರಮನೆ ನಟರಾಜ್ ಹೊಳ್ಳ, ಓಡಿಸಿದವರು- ಪಣಪೀಲ ಪ್ರವೀಣ್ ಕೋಟ್ಯಾನ್

ಮಂಗಳೂರು ಕಂಬಳ ವಿಜೇತರಿಗೆ ಸಮಾರೋಪ ಸಮಾರಂಭದಲ್ಲಿ ಸಮಿತಿ ಅಧ್ಯಕ್ಷ ಕ್ಯಾ.ಬ್ರಿಜೇಶ್ ಚೌಟ ಭಾನುವಾರ ಬಹುಮಾನ ವಿತರಿಸಿದರು.

ನೇಗಿಲು ಹಿರಿಯ: ಪ್ರಥಮ- ಬೋಳದಗುತ್ತು ಸತೀಶ್ ಶೆಟ್ಟಿ ಬಿ, ಓಡಿಸಿದವರು- ಬೈಂದೂರು ವಿಶ್ವನಾಥ ದೇವಾಡಿಗ, ದ್ವಿತೀಯ: ಹೊನ್ನಾರ್ ಸೂರ್ಯಶ್ರೀ ರತ್ನ ಸದಾಶಿವ ಶೆಟ್ಟಿ ಎ, ಓಡಿಸಿದವರು- ಬೈಂದೂರು ಮಂಜುನಾಥ ಗೌಡ

ನೇಗಿಲು ಕಿರಿಯ: ಪ್ರಥಮ: ಕಟೀಲು ಕಿನ್ನಿಗೋಳಿ ಪ್ರಖ್ಯಾತ್ ಪ್ರಣೀತ್ ಶೆಟ್ಟಿ, ಓಡಿಸಿದವರು- ಮಾಸ್ತಿಕಟ್ಟೆ ಸ್ವರೂಪ್, ದ್ವಿತೀಯ- ಮೂಡುಬೆಳ್ಳೆ ಜವನೆರ್, ಓಡಿಸಿದವರು- ಹೀರೆಬೆಟ್ಟು ಪ್ರದೀಪ್

ಭಾನುವಾರ ರಾತ್ರಿ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಲಾಯಿತು. ಕಂಬಳ ಸಮಿತಿ ಅಧ್ಯಕ್ಷ ಕ್ಯಾ.ಬ್ರಿಜೇಶ್ ಚೌಟ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಕೆ.ಪ್ರಕಾಶ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಸುಜಿತ್ ಪ್ರತಾಪ್, ಸಂಚಾಲಕರಾದ ಸಾಂತ್ಯಗುತ್ತು ಸಚಿನ್ ಶೆಟ್ಟಿ, ಕಿಶೋರ್ ಕುಮಾರ್, ಕೋಶಾಧಿಕಾರಿ ತಲಪಾಡಿ ದೊಡ್ಡಮನೆ ಪ್ರೀತಮ್ ರೈ ಮತ್ತಿತರರಿದ್ದರು.

ಪುತ್ತೂರಲ್ಲಿ ರಾಮ್‌ರಾಜ್ ಮಳಿಗೆ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಎ.ವಸಂತ್ ಕೆದಿಲಾಯ ರಾಮ್‌ರಾಜ್ ಕಾಟನ್ ಕಂಪನಿಯ ನೂತನ ಮಳಿಗೆ ಉದ್ಘಾಟಿಸಿದರು. ಕೊಕೋ ಗುರು ಸಂಸ್ಥೆ ಮಾಲೀಕ ಶಿವಶಂಕರ ಭಟ್, ಪ್ರಾವಿಡೆನ್ಸ್ ಪ್ಲಾಝಾ ಮಾಲೀಕ ಜಯಕುಮಾರ್ ನಾಯರ್, ಪುತ್ತಿಲ ಪರಿವಾರ ಸಂಸ್ಥಾಪಕ ಅರುಣ್ ಕುಮಾರ್ ಪುತ್ತಿಲ ಮತ್ತಿತರರು ಇದ್ದರು.

ಪುತ್ತೂರು: ಕಾಟನ್ ಬಟ್ಟೆ ಮೂಲಕ ದೇಶಾದ್ಯಂತ ಹೆಸರಿವಾಸಿಯಾಗಿರುವ ರಾಮ್‌ರಾಜ್ ಕಾಟನ್ ಮಳಿಗೆ ಪುತ್ತೂರಿನಲ್ಲಿ ಆರಂಭವಾಗುತ್ತಿರುವುದು ಸಂತಸದ ವಿಚಾರ. ಶ್ರೀ ಮಹಾಲಿಂಗೇಶ್ವರನ ಅನುಗ್ರಹದ ಮೂಲಕ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಹೊಂದಲಿ ಎಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಎ.ವಸಂತ್ ಕೆದಿಲಾಯ ಹೇಳಿದರು.

ಪುತ್ತೂರಿನ ಏಳ್ಮುಡಿಯಲ್ಲಿರುವ ಪ್ರಾವಿಡೆನ್ಸ್ ಪ್ಲಾಝಾದಲ್ಲಿ ಆರಂಭವಾಗಿರುವ ಪ್ರಸಿದ್ಧ ರಾಮ್‌ರಾಜ್ ಕಾಟನ್ ಕಂಪನಿಯ ನೂತನ ಮಳಿಗೆಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದರು.

ಪುತ್ತೂರು ಆಸುಪಾಸಿನ ಪ್ರದೇಶದಿಂದಲೂ ಆಗಮಿಸುವ ಗ್ರಾಹಕರ ಅಗತ್ಯಗಳನ್ನು ಪೂರೈಸುವ ಮೂಲಕ ಒಳ್ಳೆಯ ಸೇವೆ ನೀಡಲಿ ಎಂದು ಆಶಿಸಿದರು. ಕೊಕೋ ಗುರು ಸಂಸ್ಥೆ ಮಾಲೀಕ ಶಿವಶಂಕರ ಭಟ್, ಪ್ರಾವಿಡೆನ್ಸ್ ಪ್ಲಾಝಾದ ಮಾಲಕ ಜಯಕುಮಾರ್ ನಾಯರ್, ಪುತ್ತಿಲ ಪರಿವಾರದ ಸಂಸ್ಥಾಪಕ ಅರುಣ್ ಕುಮಾರ್ ಪುತ್ತಿಲ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕ ಪ್ರಶಾಂತ್ ಭಟ್, ಸಂಸ್ಥೆ ಮ್ಯಾನೇಜರ್ ಪ್ರಶಾಂತ್, ಸಿಬ್ಬಂದಿ, ಶಶಿಧರ ಕಿನ್ನಿಮಜಲು, ಪ್ರಜ್ಞಾ ಓಡಿಲ್ನಾಳ ಉಪಸ್ಥಿತರಿದ್ದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ
ಧರ್ಮಸ್ಥಳ 574216
ಇಂದು ದಿನಾಂಕ 01.01.2024
ನಾವುಂದ ಎಂ.ಜಿ.ರೋಡ್ ಬೃಂದಾವನ ನಿವಾಸದ ದಶಾರದಲ್ಲಿ ಶ್ರೀಮತಿ ದುತ್ತು ಶ್ರೀ ವೆಂಕಟ್ರಮಣ ಆಚಾರ್ಯ, ಮಕ್ಕಳು ಹಾಗೂ ಕುಳ್ಳನಕೆರೆ ಕುಟುಂಬಸ್ಥರ
ಹರಕೆ ಬಯಲಾಟ
ಹಿರಣ್ಯಾಕ್ಷ ಶ್ರೀನಿವಾಸ ಕಲ್ಯಾಣ

ಮಹತೋಭಾರ ಶ್ರೀ ಮಂಗಳಾದೇವಿ ಪ್ರಸಾದಿತ ಯಕ್ಷಗಾನ ಮಂಡಳಿ
ಮಂಗಳೂರು ದ. ಕ
ಇಂದು ಅಯ್ಯಪ್ಪ ಭಕ್ತವೃಂದ ವಿಟ್ಲದಲ್ಲಿ
ದಕ್ಷ ದ್ವಾರ ಮತ್ತು ಮಕರ ಜ್ಯೋತಿ
ಬುಕ್ಕಿಂಗ್‌ಗಾಗಿ ಸಂಪರ್ಕಿಸಿ:
8496931205/9902042685

ಇಂದು ರಾತ್ರಿ 9ಕ್ಕೆ
ಶ್ರೀ ವಿಘ್ನೇಶ್ವರ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ಹಿರೇಬೈಲು
ಕೊಡಿಯಾಲ್‌ಬೈಲ್
ಸ್ವರಾಜ್ ಶೆಟ್ಟಿ
545
ಶಿವದೂತೆ ಗುಳಿಗೆ
Kodialbail :94496 64389

ನಾಳೆ 02.01.2024 ರಾತ್ರಿ 9ಕ್ಕೆ
ಶ್ರೀ ಉಳ್ಳಾಲ್ತಿ ಧರ್ಮಕರಸರ ಕ್ಷೇತ್ರ ಉಕಯ, ಉಳ್ಳಾಲ, ಮಂಗಳೂರು
26
ಬೊಳ್ಳಮಲೆತ್ತಾಯ ಶಿಷ್ಯಕಲೆ
9483537111 / 9036205881

ರಾಮ ಮಂದಿರಕ್ಕೆ ಕಾಂಗ್ರೆಸ್ ವಿರೋಧ ಅರ್ಥಹೀನ

ಬೆಂಗಳೂರು: ಶ್ರೀರಾಮ ಎಲ್ಲರಿಗೂ ಪ್ರಿಯನಾದ ಆದರ್ಶಪುರುಷ. ರಾಮನ ಜನ್ಮಭೂಮಿಯಲ್ಲಿ ರಾಮ ಮಂದಿರ ನಿರ್ಮಾಣವಾಗಬೇಕೆಂಬ 500 ವರ್ಷಗಳ ಕನಸು ನನಸಾಗುತ್ತಿದ್ದು, ಕಾಂಗ್ರೆಸ್‌ನ ವಿರೋಧ ಅರ್ಥಹೀನ ಎಂದು ಬಿಜೆಪಿ ಮಾಜಿ ಸಚಿವ ಸಿ.ಟಿ.ರವಿ ಟೀಕಿಸಿದರು.

» ಮಾಜಿ ಸಚಿವ ಸಿ.ಟಿ.ರವಿ ಟೀಕೆ

ಯಶವಂತಪುರದ ಅಂತ್ಯೋದಯ ಭವನದಲ್ಲಿ ಕಾರ್ಯಕರ್ತರೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನ್ ಕೀ ಬಾತ್ ಭಾನುವಾರ ಆಲಿಸಿದ ನಂತರ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

ರಾಮ ಮಂದಿರ ಉದ್ಘಾಟನೆಯ ಐತಿಹಾಸಿಕ ಕ್ಷಣಗಳು ಸಮೀಪಿಸುತ್ತಿವೆ. ರಥಯಾತ್ರೆ ಮೂಲಕ ರಾಮಮಂದಿರ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿಕೊಟ್ಟವರು ಎಲ್.ಕೆ.ಅಡ್ವಾಣಿ. ಇದಕ್ಕಾಗಿ ಹೋರಾಡಿದವರಲ್ಲಿ ಸಾರ್ಥಕ ಭಾವ, ಪ್ರಾಣತ್ಯಾಗ ಮಾಡಿದವರ ಆತ್ಮಕ್ಕೆ ಚಿರಶಾಂತಿ ಲಭಿಸಲಿದೆ ಎಂದರು. ಅಯೋಧ್ಯೆಯ ರಾಮನ ಜನ್ಮಭೂಮಿಯಲ್ಲಿ ರಾಮಮಂದಿರ ನಿರ್ಮಿಸುತ್ತೇವೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿದ್ದೆವು, ಅದೀಗ ಈಡೇರುತ್ತಿದೆ. ಮೋದಿಯವರು ಶನಿವಾರ ಅಯೋಧ್ಯೆಗೆ ಭೇಟಿ ನೀಡಿದ ವೇಳೆ ಅರ್ಜಿದಾರ ಇಕ್ಬಾಲ್ ಅನ್ಸಾರಿ ಪುಷ್ಪವೃಷ್ಟಿ ಮಾಡಿದ್ದು, ಬದಲಾದ ಭಾರತದ ಸಂಕೇತವೆಂದು ಬಣ್ಣಿಸಿದರು.

> ಸಂಸದ ಪ್ರತಾಪಸಿಂಹ ಸೋದರ ವಿಕ್ರಮ ಸಿಂಹ ಬಂಧನ ಪ್ರಕರಣದ ಬಗ್ಗೆ ಹೆಚ್ಚಿನ ವಿವರ ಗೊತ್ತಿಲ್ಲ. ಆದರೆ ಪ್ರಕರಣದಲ್ಲಿ ಸಂಸದನ ಸೋದರ ಎಂಬುದು ಮುಖ್ಯವಾಗಬಾರದು. ರಾಜಕೀಯ ದ್ವೇಷ ಮಾಡಬಾರದು.
> | ಸಿ.ಟಿ.ರವಿ ಮಾಜಿ ಸಚಿವರು

ಮಂತ್ರಿಗಳ ಸ್ಪರ್ಧೆಗೆ ಒಪ್ಪದ ಕೈ ಹೈಕಮಾಂಡ್

ಮೊದಲನೇ ಪುಟದಿಂದ...

ಎಚ್.ಡಿ. ದೇವೇಗೌಡರು ಪ್ರಧಾನಿಯೂ ಆದರು. ಅದೇ ಮಾದರಿಯನ್ನು ಅನುಸರಿಸಬೇಕು ಎಂಬುದು ಹೈಕಮಾಂಡ್‌ಗೆ ಶಿವಕುಮಾರ್ ನೀಡಿದ ಸಲಹೆಯಾಗಿತ್ತು.

ಸಂಬಂಧಿಕರು, ಆಪ್ತರು: ಸಮರ್ಥ ಅಭ್ಯರ್ಥಿ ಲಭ್ಯವಾಗದ ಕಡೆಯಲ್ಲಿ ಸಂಬಂಧಿಕರು ಅಥವಾ ಆಪ್ತರನ್ನು ಕಣಕ್ಕೆ ಇಳಿಸಲು ಸಚಿವರಿಗೆ ಅವಕಾಶ ಇದೆ. ಒಟ್ಟಾರೆ ಅಭ್ಯರ್ಥಿ ಯಾರು ಎಂಬುದಕ್ಕಿಂತ ಗೆಲುವು ಮಾತ್ರ ಮಾನದಂಡವಾಗಬೇಕು ಎಂಬುದು ವರಿಷ್ಠರ ಅಭಿಲಾಷೆಯಾಗಿದೆ. ಲಭ್ಯ ಮಾಹಿತಿ ಪ್ರಕಾರ ಸಚಿವ ದಿನೇಶ್ ಗುಂಡೂರಾವ್ ಪತ್ನಿ ಟಿಬು ಹೆಸರು ಬೆಂಗಳೂರು ಸೆಂಟ್ರಲ್‌ಗೆ, ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯರೆಡ್ಡಿ ಹೆಸರು ಬೆಂಗಳೂರು ದಕ್ಷಿಣ, ಈಶ್ವರ ಖಂಡ್ರೆ ಸಹೋದರ ಬೀದರ್‌ಗೆ, ಎಂಬಿ ಪಾಟೀಲ್ ಆಪ್ತರೊಬ್ಬರು ಬಾಗಲಕೋಟೆಗೆ, ಚಾಮರಾಜನಗರಕ್ಕೆ ಮಹದೇವಪ್ಪ ಪುತ್ರ ಸುನಿಲ್ ಬೋಸ್, ಮೈಸೂರಿಗೆ ಯತೀಂದ್ರ ಸಿದ್ದರಾಮಯ್ಯ, ಬೆಳಗಾವಿ ಜಿಲ್ಲೆಯ ಎರಡು ಕ್ಷೇತ್ರಕ್ಕೆ ಸಚಿವ ಸತೀಶ್ ಜಾರಕಿಹೊಳಿ ಆಪ್ತರಿಗೆ ಅವಕಾಶ ಸಿಗಲಿದೆ. ಒಬ್ಬರು ಲಿಂಗಾಯತ ಹಾಗೂ ಒಬ್ಬರು ಕುರುಬರನ್ನು ಅಯ್ಕೆ ಮಾಡಲು ಜಾರಕಿಹೊಳಿ ಆಸಕ್ತರಾಗಿದ್ದಾರೆ. ದಾವಣಗೆರೆಯಲ್ಲಿ ಸಚಿವ ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಹೆಸರಿದೆ. ಆದರೆ ಶಾಮನೂರು ಆಪ್ತ ಮಂಜಪ್ಪ ಅವರನ್ನು ಮತ್ತೊಮ್ಮೆ ಕಣಕ್ಕೆ ಇಳಿಸುವ ಬಗ್ಗೆ ಕುಟುಂಬದಲ್ಲಿ ಚರ್ಚೆಯ